# Explanation

**ದಾಸರ ಅಂತರ್ಗತ, ಮುಖ್ಯ ಪ್ರಾಣಾಂತರ್ಗತ ವಿಠ್ಠಲ ದೇವರಿಗೆ ಶಿ ಸಾ ನಮನಗಳು.**

**ಡಾ. ವಿಜಯೇಂದ್ರ ದೇಸಾಯಿ**

ಓ ಮನಸೇ -

ಜ್ಞಾನಿವರೇಣ್ಯರು ಪುರುಂದರ ದಾಸರು.

ಒಂದೆಡೆ 'ಹೆಂಡತಿ ಪ್ರಾಣ ಹಿಂಡತಿ' ಎನ್ನುತ್ತಾರೆ.

ಇನ್ನೊಂದೆಡೆ 'ಹೆಂಡತಿ ಸಂತತಿ ಸಾವಿರವಾಗಲಿ' ಎನ್ನುತ್ತಾರೆ.

ವಿರೋಧಾಭಾಸವೆನುಸುವದಿಲ್ಲವೇ?

ಸರಿ.  ಒಗಟಿನ ದಾಸರು ಅವರು.

ಆಳಕ್ಕೆ ಇಳಿಯಿರಿ.  ಒಳ ಅರ್ಥ ತಿಳಿಯಿರಿ ಎನ್ನುತ್ತಾರೆ ದಾಸರು.

ಮಥಿತಾರ್ಥ ನೋಡುವ ಪ್ರಯತ್ನವಿದು --

ಮೇಲಿನ ಪದ್ಯದ ಮೇಲಕ್ಕೆ ತೋರುವ ಒಟ್ಟು ಅರ್ಥ

ಅವನು ಪುರುಷ.

ಇವಳು ಕನ್ಯೆ.

ಮದುವೆಯಾದರು. ನೂತನ ದಂಪತಿ.

ಹೆಂಡತಿ ಮಾತು ಮೀರದ ಗಂಡ.

ಅದು ಬೇಕು, ಇದು ಬೇಕು.

ನೂರೆಂಟು ಬೇಡಿಕೆ ಮಂಡನೆ ಅವಳಿಂದ.

ತಕ್ಷಣ ಪೂರೈಕೆ ಇವನಿಂದ. ನಡೆಯಿತು.

ಅತ್ತೆ, ಮಾವಂದಿರನ್ನು ಧಿಕ್ಕರಿಸಿದಳು.

ಮತ್ತೆ ಮನೆ ಬೇರೆ. ಮನ ಬೇರೆ.

ಸುಳ್ಳು ಮಾತು.  ಖರೆ ಜಗಳ.

ನೆರೆ ಹೊರೆಯವರೊಂದಿಗೆ.

ಜೀವನ ಬಂಡಿ ಎತ್ತೆತ್ತೊ ಸಾಗಿತು.  ಇಂಥದ್ದರಲ್ಲಿ ಎಲ್ಲಿ ದೇವರು, ಎಲ್ಲಿ ಧರ್ಮ! ತಿಲಾಂಜಲಿ.

ಸಾಧನೆ ಶೂನ್ಯ.

ಸಾಕಾಗಿ ಹೋಯಿತು ಗಂಡನಿಗೆ.

ಲೌಕಿಕದಲ್ಲಿ ನಡೆಯುವದನ್ನು ವಿವರಿಸಿದರು ದಾಸರು.  ಉದ್ದೇಶ ಆಧ್ಯಾತ್ಮ.

ದಾಸರು ಎಚ್ಚರಿಸುತ್ತಾರೆ.

ಇದು ಮನಸ್ಸಿನ ಒಂದು ಮುಖ.  ಕೆಟ್ಟ ಮುಖ.

ಇನ್ನೊಂದು ಮುಖ.  ಒಳ್ಳೇಯ ಮುಖವನ್ನೂ

ದಾಸರು ಹೇಳುತ್ತಾರೆ.

'ಹೆಂಡತಿ ಸಂತತಿ ಸಾವಿರವಾಗಲಿ'

ಹೆಂಡತಿ ಇಲ್ಲಿ ಒಳ್ಳೇ ಮನಸ್ಸಿನ ಪ್ರತೀಕ.

ನನ್ನ, ನಾನೇ ದೊರೆ ಎಂಬ ಅಹಂಕಾರ.

ಮನೆ, ಮಠ, ಸಂಪತ್ತು ನನ್ನದೆಂಬ ಮಮಕಾರ ತುಂಬಿತ್ತು.

ಹೆಂಡತಿ - (ಮನಸ್ಸು) ಸನ್ಮಾರ್ಗ ತೋರಿದಳು. ಸಾತ್ವಿಕ ಮಾರ್ಗದಲಿ ನಡೆಸಿದಳು.

ಮನಃ ಪರಿವರ್ತನವಾಯಿತು.

ಗೋಪಾಳ ಬುಟ್ಟಿ ಹಿಡಿದೆ.

ಮಡದಿ - (ಮನಸ್ಸು) - ವಿರಕ್ತಿ ತಂದಳು.

ಮನಸ್ಸು ಪರಮಾತ್ಮನಲ್ಲಿ ರತ.

ಒಳ್ಳೇ ದಾರಿ ಹಿಡಿಯಿತು.

ಭಕ್ತಿ, ಭವ ಸಾಗರ ತಾರಕವಾಯಿತು.

ಪುರುಂದರ ವಿಠ್ಠಲನ ಸ್ಮರಣೆ ಸಿಕ್ಕಿತು.

ಆನಂದವಾಯಿತು.

ಇಂತಹ ಹೆಂಡತಿ ಸಂತತಿ ಸಾವಿರವಾಗಲಿ.

ಅರ್ಥ ಒಳ್ಳೆಯ ಮನಸು ಕೊಡಲಿ. ಬೆಳೆಯಲಿ. ಸಾವಿರವಾಗಲಿ. ಅಭಿವೃದ್ಧಿಯಾಗಲಿ. ಸಾಧನೆಯ ದಾರಿ ಸುಗಮವಾಗಲಿ.

ದಾಸರು ಹೆಂಡತಿ ಎಂದು ಹೇಳಿದ್ದು

ನೆಪ ಮಾತ್ರ.

ಹೀಗೆ ಮನಸ್ಸೆಂಬ ಮಡದಿ.

ಸಾದನೆಗೂ ಬಾಧನೆಗೂ ದಾರಿ.

'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ'

ತಾಮಸ ಮನ ಮಾರಕ. ಸಾತ್ವಿಕ ಮನ ತಾರಕ. ಇದು ದಾಸರ ಉದ್ದೇಶ.

ಶ್ರೀ ಕೃಷ್ಣಾರ್ಪಣಮಸ್ತು.